ಇಲಾಖೆ / ವಿಷಯ: DEPARTMENT / SUBJECT: ರಕ್ಷಣಾ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ

ದಿನಾಂಕ : DATE : 11/04/2019

## ಸೋರಿದ ದಾಖಲೆ ಆಧರಿಸಿ ಅರ್ಜಿ ವಿಚಾರಣೆಗೆ ಸುಪ್ರೀಂ ಸಮ್ಮತಿ

### ಕೇಂದ್ರ ಸರಕಾರದ ಆಕ್ಷೇಪ ರದ್ದು | ಕಾಂಗ್ರೆಸ್-ಬಿಜೆಪಿ ವಾಗ್ಯುದ್ಧ

ವಿ.ಕ 11/4/19

# ಮತ್ತೆ ರಫೇಲ್ ಸದ್ದು

**ಹೊಸದಿಲ್ಲಿ:** ಕಳೆದ ಕೆಲವು ಸಮಯದಿಂದ ತಣ್ಣಗಿದ್ದ ರಫೇಲ್ ಒಪ್ಪಂದ ವಿವಾದ 17ನೇ ಲೋಕಸಭಾ ಚುನಾವಣೆಗೆ ದೇಶ ಸಜ್ಜಾಗಿರುವ ಹೊತ್ತಿನಲ್ಲಿ ಮತ್ತೆ ಸದ್ದು ಮಾಡಿದೆ.

ಫ್ರಾನ್ಸ್‌ನಿಂದ 36 ರಫೇಲ್ ಯುದ್ಧ ವಿಮಾನಗಳ ಖರೀದಿಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಎಲ್ಲ ಅರ್ಜಿಗಳನ್ನು 2018ರ ಡಿಸೆಂಬರ್ 14ರಂದು ಸುಪ್ರೀಂಕೋರ್ಟ್ ರದ್ದುಗೊಳಿಸಿತ್ತು. ಈ ತೀರ್ಪಿನ ಮರುಪರಿಶೀಲನೆಗೆ ಸಲ್ಲಿಸಿದ ಅರ್ಜಿಗಳ ವಿಚಾರಣೆಗೆ ಸುಪ್ರೀಂಕೋರ್ಟ್ ಬುಧವಾರ ಸಮ್ಮತಿಸಿದೆ. ರಕ್ಷಣಾ ಇಲಾಖೆಯಿಂದ ಸೋರಿಕೆಯಾಗಿದ್ದೆನ್ನಲಾದ 'ಅತಿ ರಹಸ್ಯ ದಾಖಲೆ'ಗಳನ್ನು ಆಧರಿಸಿ ಈ ವಿಚಾರಣೆಗೆ ಸುಪ್ರೀಂ ಒಪ್ಪಿದೆ.

'ಅರ್ಜಿದಾರರು ಅಕ್ರಮ ಮಾರ್ಗಗಳ ಮೂಲಕ ಸಂಗ್ರಹಿಸಿದ ದಾಖಲೆಗಳ ಮೇಲೆ ಸರಕಾರಕ್ಕೆ ಅಧಿಕಾರವಿದ್ದು, ಅವುಗಳನ್ನು ಪರಿಗಣಿಸಬಾರದು ಮತ್ತು ಮರುಪರಿಶೀಲನಾ ಅರ್ಜಿಯನ್ನು ಸ್ವೀಕರಿಸಬಾರದು'' ಎಂಬ ಕೇಂದ್ರ ಸರಕಾರದ ವಾದವನ್ನು ಸುಪ್ರೀಂಕೋರ್ಟ್ ತಳ್ಳಿ ಹಾಕಿದೆ.

ಸುಪ್ರೀಂಕೋರ್ಟ್‌ನ ಈ ತೀರ್ಪನ್ನು ಕಾಂಗ್ರೆಸ್ ಸ್ವಾಗತಿಸಿದ್ದು, ಇದು ಕೇಂದ್ರ ಸರಕಾರಕ್ಕೆ ದೊಡ್ಡ ಹಿನ್ನಡೆ ಎಂದು ವಾದಿಸಿದೆ. ಆದರೆ, ಬಿಜೆಪಿ ಕಾಂಗ್ರೆಸ್ ವಾದವನ್ನು ತಳ್ಳಿ ಹಾಕಿದ್ದು, 'ಇದು ಕಾನೂನು ಪ್ರಕ್ರಿಯೆಯ ಭಾಗ. ಸುಪ್ರೀಂಕೋರ್ಟ್ ಈ ದಾಖಲೆಗಳನ್ನು ಆಧರಿಸಿ ತೀರ್ಪನ್ನೇನೂ ನೀಡಿಲ್ಲ,'' ಎಂದು ಹೇಳಿದೆ. »07



ಚೌಕಿದಾರ್ ಕಳವು ಮಾಡಿದ್ದಾರೆ ಎಂಬುದನ್ನು ಸುಪ್ರೀಂಕೋರ್ಟ್ ಸ್ಪಷ್ಟಪಡಿಸಿದೆ. ರಫೇಲ್ ಒಪ್ಪಂದದಲ್ಲಿ ಭ್ರಷ್ಟಾಚಾರವಿದೆ ಎನ್ನುವುದನ್ನು ಒಪ್ಪಿದೆ. ನನ್ನ ಆರೋಪಗಳ ಬಗ್ಗೆ ಸುಪ್ರೀಂಕೋರ್ಟ್ ವಿಚಾರಣೆ ನಡೆಸಲಿದೆ.

**- ರಾಹುಲ್ ಗಾಂಧಿ**

ರಾಹುಲ್ ಗಾಂಧಿ ಅವರು ಕೋರ್ಟ್ ಹೇಳದೆ ಇರುವ ಮಾತುಗಳನ್ನು ಹೇಳಿರುವುದು ಅವರ ಹತಾಶೆಯನ್ನು ತೋರಿಸುತ್ತದೆ. ಅವರು ಸಭ್ಯತೆಯ ಗಡಿಯನ್ನು ಮೀರಿದ್ದಾರೆ. ಇದು ನ್ಯಾಯಾಂಗ ನಿಂದನೆಯಾಗಿದೆ.

**-ನಿರ್ಮಲಾ ಸೀತಾರಾಮನ್** ರಕ್ಷಣಾ ಸಚಿವೆ

### ಅಬ್ ಹೋಗಾ ನ್ಯಾಯ್: ಕಾಂಗ್ರೆಸ್

''ಮೋದಿ ಅವರು ಇದುವರೆಗೆ ಸುಪ್ರೀಂಕೋರ್ಟ್‌ನ ಕ್ಲೀನ್‌ಚಿಟ್‌ನ ಸೋಗಿನಲ್ಲಿ ಅಡಗಿಕೊಂಡಿದ್ದರು. ಈಗ ಅವರ ಮುಖವಾಡ ಕಳಚಲಾಗಿದೆ,'' ಎಂದು ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೇವಾಲಾ ಹೇಳಿದ್ದು, ಪಕ್ಷದ ಚುನಾವಣಾ ಪ್ರಚಾರ ವಾಕ್ಯವಾದ 'ಅಬ್ ಹೋಗಾ ನ್ಯಾಯ್' ಎಂದು ಪ್ರತಿಪಾದಿಸಿದ್ದಾರೆ. ''ಅಧಿಕೃತ ಗೌಪ್ಯತಾ ಕಾಯಿದೆಯಡಿ ಅಡಗಿಕೊಳ್ಳಲು ಇನ್ನು ಅವಕಾಶವಿಲ್ಲ. ಮೋದಿ ಅವರೇ ನೀವು ಎಷ್ಟು ಬೇಕಾದರೂ ಸುಳ್ಳು ಹೇಳಬಹುದು. ಆದರೆ, ಸತ್ಯ ಹೊರಬಂದೇ ಬರುತ್ತದೆ,'' ಎಂದಿದ್ದಾರೆ ಸುರ್ಜೇವಾಲಾ.

### ಕೇಂದ್ರಕ್ಕೆ ಹಿನ್ನಡೆಯಲ್ಲ: ಬಿಜೆಪಿ

ಸುಪ್ರೀಂಕೋರ್ಟ್ ತೀರ್ಪು ಕೇಂದ್ರಕ್ಕೆ ಹಿನ್ನಡೆ ಎನ್ನುವುದು ಪ್ರತಿಪಕ್ಷಗಳ ಪ್ರಾಯೋಜಿತ ವಾದ. ಅಕ್ರಮ ಮಾರ್ಗದ ಮೂಲಕ ಪಡೆದ ದಾಖಲೆಯಾದರೂ ಸರಿ ಅದನ್ನು ಪರಿಶೀಲಿಸಲಾಗುವುದು ಎಂದಷ್ಟೇ ಕೋರ್ಟ್ ಹೇಳಿದೆ. ಮರುಪರಿಶೀಲನಾ ಅರ್ಜಿಯ ವಿಚಾರಣಾರ್ಹತೆಯ ಬಗ್ಗೆ ಇನ್ನೂ ಅದು ತೀರ್ಪು ನೀಡಿಲ್ಲ ಎಂದು ಕೇಂದ್ರ ಕಾನೂನು ಸಚಿವ ರವಿಶಂಕರ್ ಪ್ರಸಾದ್ ಹೇಳಿದ್ದಾರೆ. ''ಸಿಎಜಿ ಈಗಾಗಲೇ ಒಪ್ಪಂದವನ್ನು ಒಪ್ಪಿದೆ. ಹಿಂದಿನ ತೀರ್ಪಿನ ಮರುಪರಿಶೀಲನಾ ಅರ್ಜಿ ಇನ್ನೂ ಬಾಕಿ ಇದೆ,'' ಎಂದು ಸಚಿವ ಅರುಣ್ ಜೇಟ್ಲಿ ಟ್ವೀಟ್ ಮಾಡಿದ್ದಾರೆ.

### ವಿಚಾರಣೆಗೆ ಬರಲಿರುವ ಅಂಶಗಳು

ಮರುಪರಿಶೀಲನಾ ಅರ್ಜಿ ವಿಚಾರಣೆ ವೇಳೆ ಕೇವಲ ರಫೇಲ್ ವಿಮಾನಗಳ ದರ ಕುರಿತ ಪ್ರಶ್ನೆಯಷ್ಟೇ ಅಲ್ಲ, ರಫೇಲ್ ಯುದ್ಧ ವಿಮಾನ ತಯಾರಿಸುವ ಡಸ್ಸಾಲ್ಟ್ ಕಂಪನಿ ತನ್ನ ಭಾರತೀಯ ಆಫ್‌ಸೆಟ್ ಪಾಲುದಾರ ಕಂಪನಿಯ ಆಯ್ಕೆ ಮಾಡಿದ ವಿಧಾನವನ್ನೂ ಪರಿಶೀಲಿಸಲಾಗುವುದು ಎಂದು ತೀರ್ಪಿನಲ್ಲಿ ಹೇಳಲಾಗಿದೆ. ಮುಂದಿನ ವಿಚಾರಣೆಯ ದಿನಾಂಕ ಸದ್ಯವೇ ನಿಗದಿ ಮಾಡುವುದಾಗಿ ಸುಪ್ರೀಂ ಹೇಳಿದೆ.

# ಸದ್ದು ಮಾಡಿದ ರಫೇಲ

ವಿ.ಕ. 11/4/19

ಲ ಪುಟದಿಂದ

**ಹೇಳಿದ್ದೇನು?**

ರ್ ಪರಿಶೀಲನಾ ವಿಚಾರಣಾರ್ಹತೆ ಪ್ರಶ್ನಿಸಿದ ಕೇಂದ್ರ ಪ್ರಾಥಮಿಕ ಆಕ್ಷೇಪ ವು ತಳ್ಳಿಹಾಕಿದ್ದೇವೆ,'' ಮುಖ್ಯ ನ್ಯಾಯಮೂರ್ತಿ ಗೊಗೊಯ್, ಮೂರ್ತಿಗಳಾದ ಎಸ್. ಕೌಲ್ ಮತ್ತು ಕೆ.ಎಂ. ಫ್ ಅವರನ್ನೊಳಗೊಂಡ ಬುಧ ವಾರ ಹೇಳಿತು. ಇದರೊಂದಿಗೆ, ಒಂದು ವೇಳೆ

> ರಫೇಲ್ ವಿಚಾರದಲ್ಲಿ ಸುಪ್ರೀಂ. ಆದೇಶವನ್ನು ಸ್ವಾಗತಿಸುತ್ತೇವೆ. ಈ ವಿಚಾರದಲ್ಲಿ ನಾವು ಪಾರದರ್ಶಕವಾಗಿದ್ದು, ಯಾವುದೇ ರೀತಿಯ ತನಿಖೆ ನಡೆಸಿದರೂ ಸಹಕರಿಸುತ್ತೇವೆ. ಇದರಲ್ಲಿ ಮುಚ್ಚಿಡುವಂತಹದ್ದು ಏನೂ ಇಲ್ಲ.
>
> **-ರಾಮ್ ಮಾಧವ್**, ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ(ಬೆಂಗಳೂರಿನಲ್ಲಿ)

> ರಫೇಲ್ ಡೀಲ್ ವಿಚಾರದಲ್ಲಿ ಸುಪ್ರೀಂಕೋರ್ಟ್ ನಿರ್ಧಾರವನ್ನು ಕಾಂಗ್ರೆಸ್ ಸ್ವಾಗತಿಸುತ್ತದೆ.
>
> **-ಖುಷ್ಬು ಸುಂದರ್**, ಎಐಸಿಸಿ ವಕ್ತಾರೆ

ರ್ಜಿದಾರರು ಸಲ್ಲಿಸಿ ರುವ ದಾಖಲೆಗಳು ಅಕ್ರಮ ದಾರಿ ಯಿಂದ ಸಂಪಾದಿಸಿದ್ದೇ ಆದರು ವುಗಳನ್ನು ವಿಚಾರಣೆಗೆ ಬಳಸಬ ಹುದು ಎಂಬ ಸಂದೇಶವನ್ನು ನೀಡಿದೆ.

**ರ್ಜಿದಾರರ ಹರ್ಷ:** ತೀರ್ಪು ಮರುಪರೀಲನೆಗೆ ಅರ್ಜಿ ಸಲ್ಲಿಸಿದ್ದ ಮಾಜಿ ಕೇಂದ್ರ ಮಂತ್ರಿಗಳಾದ ಅರುಣ್ ಶೌರಿ, ಯಶ್ವಂತ್ ಸಿನ್ಹಾ ಮತ್ತು ವಕೀಲ ಪ್ರಶಾಂತ್ ಭೂಷಣ್ ಅವರ ತೀರ್ಪಿನ ಬಗ್ಗೆ ಹರ್ಷ ವ್ಯಕ್ತಪಡಿಸಿದ್ದಾರೆ. 'ರಕ್ಷಣಾ ವ್ಯವಹಾರದಲ್ಲಿ ಯಾವುದೇ ತಪ್ಪುಗಳ ಸಂಭವಿಸಲಾರದು,' ಎಂಬ ಕೇಂದ್ರ ಸರಕಾರದ ವಿಲಕ್ಷಣ ವಾದವನ್ನು ತಳ್ಳಿ ಹಾಕಿರುವ ತೀರ್ಪು ಖುಷಿ ಕೊಟ್ಟಿದೆ ಎಂದು ಅರುಣ್ ಶೌರಿ ಹೇಳಿದ್ದಾರೆ.

**ಏನಾಗಿತ್ತು?:** ''ರಫೇಲ್ ಯುದ್ಧ ವಿಮಾನಗಳ ಖರೀದಿಗೆ ಸಂಬಂಧಿಸಿದ ನಿರ್ಧಾ ತೆಗೆದುಕೊಳ್ಳುವ ಪ್ರಕ್ರಿಯೆ ಬಗ್ಗೆ ಸಂಶಯಪಡಲು ಆಧಾರಗಳಿಲ್ಲ,'' ಎಂದು 2018 ಡಿಸೆಂಬರ್ 14ರ ತೀರ್ಪಿನಲ್ಲಿ ಸುಪ್ರೀಂಕೋರ್ಟ್ ಹೇಳಿತ್ತು.

ಈ ನಡುವೆ ಅರ್ಜಿದಾರರು, ಅತ್ಯಂತ ಮಹತ್ವದ ಕೆಲವು ದಾಖಲೆಗಳನ್ನು ಸುಪ್ರೀಂ ಸಲ್ಲಿಸಿ ತೀರ್ಪಿನ ಮರುವಿಮರ್ಶೆಗೆ ಒತ್ತಾಯಿಸಿದ್ದರು. ಆಗ ಮಧ್ಯಪ್ರವೇಶಿಸಿದ್ದ ಕೇಂದ್ರ ಸರಕಾರ, ಈ ದಾಖಲೆಗಳು ಅಕ್ರಮ ದಾರಿಯಿಂದ ಪಡೆದುದಾಗಿದ್ದು, ಇವುಗಳನ್ನು ಸಾಕ್ಷಿಗಳಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂದು ಭಾರತೀಯ ಸಾಕ್ಷ್ಯ ಕಾಯಿದೆಯ ಸೆಕ್ಷನ್ 123 ಆಧರಿಸಿ ವಾದ ಮಾಡಿತ್ತು. ಆದರೆ, ಅರ್ಜಿದಾರರು ಮಾಹಿತಿ ಹಕ್ಕು ಕಾಯಿದೆಯನ್ನು ಉಲ್ಲೇಖಿಸಿದ್ದರು. ಮಾರ್ಚ್ 14ರಂದು ವಿಚಾರಣೆ ನಡೆಸಿದ್ದ ಸುಪ್ರೀಂಕೋರ್ಟ್ ತೀರ್ಪನ್ನು ಕಾಯ್ದಿರಿಸಿತ್ತು.